**ಸಾಕ್ಷಿಯನ್ನು ದಿಃ 17.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

1. ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ. ಪೋಲಿಸರಿಗೆ ದೂರನ್ನು ನಾನೇ ನೀಡಿದ್ದೇನೆ. ಅಪಘಾತಪಡಿಸಿದ ವಾಹನದ ಸಂಖ್ಯೆಯನ್ನು ಗ್ರಾಮಸ್ಥರು ಹಾಗೂ ನಾಸಿರ್ ಎಂಬಾತ ಹೇಳಿದ್ದಾನೆ. ನಾಸಿರ್ ನಮ್ಮ ಊರಿನವರಲ್ಲ. ನನಗೆ ಪರಿಚಿತರಲ್ಲ. ಮಹಜರಿಗೆ ಸ್ಥಳಕ್ಕೆ ಹೋದಾಗ ನಾಸಿರ್ ಬಗ್ಗೆ ತಿಳಿಯಿತು. ಅಪಘಾತದ ಸಮಯದಲ್ಲಿ ನಾಸಿರ್ ಸ್ಥಳದಲ್ಲಿದ್ದರು ಎಂದು ತಿಳಿಯಿತು. ದೂರನ್ನು ನಾನು ಠಾಣೆಗೆ ಹೋಗಿ ನೀಡಿದ್ದೇನೆ. ದೂರು ನೀಡುವ ಸಮಯದಲ್ಲಿ ನನಗೆ ಅಪಘಾತದಪಡಿಸಿದ ವಾಹನದ ಬಗ್ಗೆ ಗೊತ್ತಿರಲಿಲ್ಲ. ನಾಸಿರ್ ರವರು ನನಗೆ ವಾಹನದ ಸಂಖ್ಯೆ ಹೇಳಿಲ್ಲ. ಆಟೋದವರಾದ ಹರ್ಷರವರು ಅಪಘಾತಪಡಿಸಿರುವುದಾಗಿ ತಿಳಿಸಿದ್ದಾರೆ. ಹರ್ಷರವರು ನನಗೆ ಪರಿಚಯದವರಲ್ಲ. ಅಪಘಾತದ ದಿನ ನನ್ನ ಯಜಮಾನರು ಕೆಲಸ ಬಿಟ್ಟು ನಡೆದುಕೊಂಡು ಬರುತ್ತಿದ್ದರು. ಅಪಘಾತದ ಸ್ಥಳದ ಬಗ್ಗೆ ನನಗೆ ಮಾಹಿತಿ ಇದೆ. ರಸ್ತೆಯು ನೇರ ರಸ್ತೆ ಎಂದರೆ ಸರಿ. ಅಪಘಾತ ಸ್ಥಳ ರಸ್ತೆಯ ಎಡಬದಿಯಾಗಿತ್ತು. ರಸ್ತೆಯ ಅಂಚಿನಿಂದ 4 ಅಡಿ ಎಡಕ್ಕೆ ಮಣ್ಣಿನ ರಸ್ತೆಗೆ ಬಿದ್ದಿದ್ದಾರೆ.

2. ಆಟೋಗೆ ಏನೇನು ಜಖಂ ಆಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಯಜಮನಾರಿಗೆ ಅಪರಿಚಿತ ವಾಹನ ಅಪಘಾತಪಡಿಸಿದ್ದು ಪರಿಹಾರ ಹಣಕ್ಕಾಗಿ ಈ ವಾಹನವನ್ನು ಸಿಲುಕಿಸಿದ್ದೇವೆ ಎಂದರೆ ಸರಿಯಲ್ಲ.ಆ ಕಾರಣಕ್ಕಾಗಿ ಒಂದು ದಿನ ತಡವಾಗಿ ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಯಜಮಾನರು ಗಾರೆ ಕೆಲಸ ಮಾಡುತ್ತಿದ್ದರು. ಅವರ ಆದಾಯದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸುಮ ಹಾಗೂ ಶೋಭಾ ನನ್ನ ಹೆಣ್ಣು ಮಕ್ಕಳು ಅವರಿಗೆ ಮದುವೆಯಾಗಿದೆ ಅವರು ಬೆಂಗಳೂರಿನಲ್ಲಿ ವಾಸ ಇದ್ದಾರೆ. ರಾಜೇಶ್ ನನ್ನ ಮಗ ಮನೆಯ ಸಂಪೂರ್ಣ ಜವಬ್ದಾರಿ ಅವನೇ ನೋಡುತ್ತಾನೆ ಎಂದರೆ ಸರಿಯಲ್ಲ. ಆತನಿಗೆ ಮದುವೆಯಾಗಿಲ್ಲ. ನನ್ನ ಯಜಮನಾರು ಮಧ್ಯಪಾನ ಮಾಡಿ ರಸ್ತೆಯಲ್ಲಿ ನಡೆದುಕೊಡು ಹೋಗುವಾಗ ಅಪರಿಚಿತ ವಾಹನ ಅಪಘಾತ

ಪಡಿಸಿದೆ ಎಂದರೆ ಸರಿಯಲ್ಲ. ಎದುರುದಾರರ ವಾಹನಕ್ಕೆ ಪರ್ಮಿಟ್ ಇತ್ಯಾದಿ ಇಲ್ಲದ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಭಾದ್ಯರಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಯಜಮಾನರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.